# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ-3 ರ 33 ಪ್ಯಾಕೇಜ್ ಟೆಂಡರ್‌ಗಳಿಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:22:ಆರ್‌ಆರ್‌ಸಿ:2014, ದಿನಾಂಕ:18-11-2014.
2. ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ:21:ಆರ್‌ಆರ್‌ಸಿ:2015, ದಿನಾಂಕ:11-2-2015.
3. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:6:ಆರ್‌ಆರ್‌ಸಿ:2015, ದಿನಾಂಕ:31-3-2015.
4. ಪ್ಯಾಕೇಜ್ ಟೆಂಡರ್‌ಗಳಿಗೆ ಅನುಮೋದನೆ ನೀಡಿದ ಆದೇಶಸಂಖ್ಯೆ:ಗ್ರಾಅಪ:58:ಆರ್‌ಆರ್‌ಸಿ:2015, ದಿನಾಂಕ: 20-4-2015.
5. ಪ್ಯಾಕೇಜ್ ಟೆಂಡರ್‌ಗಳಿಗೆ ಅನುಮೋದನೆ ನೀಡಿದ ಆದೇಶಸಂಖ್ಯೆ:ಗ್ರಾಅಪ:58/1:ಆರ್‌ಆರ್‌ಸಿ:2015, ದಿನಾಂಕ: 24-4-2015.
6. ಪ್ಯಾಕೇಜ್ ಟೆಂಡರ್‌ಗಳಿಗೆ ಅನುಮೋದನೆ ನೀಡಿದ ಆದೇಶಸಂಖ್ಯೆ:ಗ್ರಾಅಪ:58/2:ಆರ್‌ಆರ್‌ಸಿ:2015, ದಿನಾಂಕ: 30-6-2015.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾ. ಅ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ದಿನಾಂಕ:10-9-2015 ರಂದು ನಡೆದ ಟೆಂಡರ್ ಅಂಗೀಕಾರ ಪ್ರಾಧಿಕಾರ ಸಮಿತಿ ಸಭೆಯ ನಡವಳಿ.

**ಪ್ರಸ್ತಾವನೆ:**

ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ-3 ರಡಿ ರಾಜ್ಯದ ಪ್ರತಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರು ಹೆಚ್ಚು ವಾಸಿಸುವ ಗ್ರಾಮಗಳಿಗೆ ಸಂಪರ್ಕ ಒದಗಿಸಲು 8 ಕಿ.ಮೀ. ಒಳಗೊಂಡಂತೆ ಒಟ್ಟು 20 ಕಿ.ಮೀ.ನಂತೆ 3780 ಕಿ.ಮೀ. ರಸ್ತೆಗಳನ್ನು ಅಂದಾಜು ಮೊತ್ತ ರೂ.2079.00ಕೋಟಿಗಳಲ್ಲಿ ಅಭಿವೃದ್ಧಿಪಡಿಸಲು ಆಯ್ಕೆ ಮಾಡುವ ರಸ್ತೆಗಳನ್ನು ಮತ್ತು ರಸ್ತೆಗಳ ಡಿಪಿಆರ್ ಗಳನ್ನು ಪಿಎಂಜಿಎಸ್‌ವೈ-IIರ ಮಾನದಂಡಗಳನ್ನು ಅನುಸರಿಸಿ ತಯಾರಿಸುವ ಕಾರ್ಯಕ್ರಮ ಅನುಷ್ಠಾನಕ್ಕೆ ಮೇಲೆ ಓದಲಾದ-1ರ ಸರ್ಕಾರದ ಆದೇಶದಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಈ ಯೋಜನೆಯ ವಿಸ್ತೃತ ಯೋಜನಾ ವರದಿಗಳನ್ನು (ಡಿಪಿಆರ್) ದಿನಾಂಕ:26-11-2014 ರಿಂದ ಪರಿಷ್ಕೃತಗೊಂಡು ವೃತ್ತವಾರು ಪ್ರಕಟಿಸಿದ ದರಸೂಚಿಯಂತೆ ತಯಾರಿಸಲಾಗಿ, ರಾಜ್ಯದ ಒಟ್ಟು 1493 ಸಂಖ್ಯೆಗಳ ರಸ್ತೆ ಕಾಮಗಾರಿಗಳ ಉದ್ದ 3855.23 ಕಿ.ಮೀ. ಹಾಗೂ 73 ಉದ್ದ ಸೇತುವೆಗಳು ಸೇರಿಕೊಂಡಂತೆ ಈಗಾಗಲೆ ಸರ್ಕಾರದ ಆದೇಶ ದಿನಾಂಕ:18-11-2014ರಂತೆ ಅನುಮೋದಿತ ಅಂದಾಜು ಮೊತ್ತ ರೂ.2079.00ಕೋಟಿಗಳಿಗೆ ಬದಲಾಗಿ ಪರಿಷ್ಕೃತ ಅಂದಾಜು ರೂ.2676.57ಕೋಟಿಗಳಾದ್ದರಿಂದ ಈ ಸಂಬಂಧ ಸಚಿವ ಸಂಪುಟದ ಅನುಮೋದನೆ ನಿರೀಕ್ಷಿಸಿ,

ಸದರಿ ಯೋಜನೆಯ ಕಾಮಗಾರಿಗಳ ಅನುಷ್ಠಾನಕ್ಕೆ ಟೆಂಡರ್ ಪ್ರಕ್ರಿಯೆಯನ್ನು ಚಾಲನೆಗೊಳಿಸುವಂತೆ ಹಾಗೂ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡುವವರೆಗೂ ಕಾರ್ಯಾದೇಶ ನೀಡಬಾರದೆಂದು ಮೇಲೆ ಓದಲಾದ-2ರ ಸರ್ಕಾರದ ಪತ್ರ ದಿನಾಂಕ:11-2-2015ರಲ್ಲಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಗೆ ಸೂಚನೆ ನೀಡಲಾಗಿರುತ್ತದೆ. ಸದರಿ ವಿಷಯಕ್ಕೆ ಮುಂದುವರೆದಂತೆ ಸಚಿವ ಸಂಪುಟವು ನೀಡಿದ ಅನುಮೋದನೆಯಂತೆ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ-3ರಡಿ ರಾಜ್ಯದ ಪ್ರತಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರು ಹೆಚ್ಚು ವಾಸಿಸುವ ಗ್ರಾಮಗಳಿಗೆ ಸಂಪರ್ಕ ಒದಗಿಸಲು 8 ಕಿ.ಮೀ. ಒಳಗೊಂಡಂತೆ ಒಟ್ಟು 20 ಕಿ.ಮೀ.ನಂತೆ ರಾಜ್ಯದ ಒಟ್ಟು 1493 ರಸ್ತೆ ಕಾಮಗಾರಿಗಳ ಒಟ್ಟು ಉದ್ದ 3855.23 ಕಿ.ಮೀ. ಹಾಗೂ 73 ಉದ್ದ ಸೇತುವೆಗಳನ್ನು (Long Span Bridge) ರೂ.2676.57ಕೋಟಿ ಅಂದಾಜು ಮೊತ್ತದಲ್ಲಿ ಅಭಿವೃದ್ಧಿಪಡಿಸಲು ಹಾಗೂ KTPP ಕಾಯಿದೆಯಡಿ ಟೆಂಡರ್ ಕರೆದು ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ ಮುಖಾಂತರ ಅನುಷ್ಠಾನಗೊಳಿಸಲು ರಸ್ತೆ ಹಾಗೂ ಸೇತುವೆ ಕಾಮಗಾರಿಗಳಿಗೆ ಮೇಲೆ ಓದಲಾದ-3ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

ಅದರಂತೆ ಕರ್ನಾಟಕ ಗ್ರಾಮೀಣ ಸಂಸ್ಥೆ ಅಭಿವೃದ್ಧಿಯಿಂದ ಮೇಲಿನ ಎಲ್ಲಾ 1493 ಕಾಮಗಾರಿಗಳನ್ನು 409 ಪ್ಯಾಕೇಜ್ ~~ಮಾಡಿ ಕರೆಯಲಾದ~~ ಟೆಂಡರ್‌ನಲ್ಲಿ ಸ್ವೀಕೃತವಾದ 304 ಪ್ಯಾಕೇಜ್‌ಗಳ ಪೈಕಿ ವಿವಿಧ ಕಾರಣಗಳಿಂದ ಪರಿಗಣಿಸಲಾಗದ 135 ಪ್ಯಾಕೇಜ್‌ಗಳು ಹಾಗೂ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ ಅಧಿಕಾರ ಮಿತಿಯಲ್ಲಿ ಇತ್ಯರ್ಥಪಡಿಸಿದ 27 ಪ್ಯಾಕೇಜ್‌ಗಳನ್ನು ಹೊರತುಪಡಿಸಿ, ಉಳಿದಂತೆ 142 ಪ್ಯಾಕೇಜ್ ಟೆಂಡರ್‌ಗಳ ಒಟ್ಟು ಮೊತ್ತ ರೂ.973.26ಕೋಟಿಗಳಿಗೆ ದಿನಾಂಕ:15-4-2015ರಂದು ನಡೆದ ಟೆಂಡರ್ ಅಂಗೀಕಾರ ಸಮಿತಿ ಸಭೆಯ ತೀರ್ಮಾನದಂತೆ ಮೇಲೆ ಓದಲಾದ-4ರಲ್ಲಿ ಅನುಮೋದನೆ ನೀಡಲಾಗಿದೆ.

ದಿನಾಂಕ:18-4-2015ರಂದು ನಡೆದ ಟೆಂಡರ್ ಅಂಗೀಕಾರ ಸಮಿತಿ ತೀರ್ಮಾನದಂತೆ ಮೇಲೆ ಓದಲಾದ-5ರ ಆದೇಶದಲ್ಲಿ ಪ್ರತಿಕ್ರಿಯೆ ಬಾರದ ಉಳಿದ ಪ್ಯಾಕೇಜ್‌ಗಳಿಗೆ ಕೆಆರ್‌ಆರ್‌ಡಿಎ ಯಿಂದ ಕರೆಯಲಾದ ಮರು ಟೆಂಡರ್‌ಗಳಲ್ಲಿ ತಾಂತ್ರಿಕ ಬಿಡ್‌ಗಳ ಪರಿಶೀಲನೆಯ ನಂತರ ಒಟ್ಟಾರೆ 88 ಪ್ಯಾಕೇಜ್‌ಗಳಲ್ಲಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ ಅಧಿಕಾರ ವ್ಯಾಪ್ತಿಯಲ್ಲಿ ಅನುಮೋದಿಸಿದ 10 ಬಿಡ್‌ಗಳನ್ನು ಹೊರತುಪಡಿಸಿ ಒಟ್ಟಾರೆ 62 ಟೆಂಡರ್ ಪ್ಯಾಕೇಜ್‌ಗಳ ಒಟ್ಟು ಟೆಂಡರ್ ಮೊತ್ತ ರೂ.409.1356ಕೋಟಿಗಳಿಗೆ ಅನುಮೋದನೆ ನೀಡಲಾಗಿದೆ.

ಮುಂದುವರೆದು ದಿನಾಂಕ:10-6-2015ರಂದು ನಡೆದ ಟೆಂಡರ್ ಅಂಗೀಕಾರ ಸಮಿತಿ ತೀರ್ಮಾನದಂತೆ, ಮೇಲೆ ಓದಲಾದ-6ರ ಆದೇಶದಲ್ಲಿ ಪ್ರತಿಕ್ರಿಯೆ ಬಾರದ ಉಳಿದ ಪ್ಯಾಕೇಜ್‌ಗಳಿಗೆ ಕೆಆರ್‌ಆರ್‌ಡಿಎ ಯಿಂದ ಕರೆಯಲಾದ ಮರು ಟೆಂಡರ್‌ಗಳಲ್ಲಿ ತಾಂತ್ರಿಕ ಬಿಡ್‌ಗಳ ಪರಿಶೀಲನೆಯ ನಂತರ ಒಟ್ಟಾರೆ 111 ಪ್ಯಾಕೇಜ್‌ಗಳಲ್ಲಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ ಅಧಿಕಾರ ವ್ಯಾಪ್ತಿಯಲ್ಲಿ ಅನುಮೋದಿಸಿದ 2 ಬಿಡ್‌ಗಳನ್ನು ಹೊರತುಪಡಿಸಿ ಒಟ್ಟಾರೆ 109 ಟೆಂಡರ್ ಪ್ಯಾಕೇಜ್‌ಗಳ ಒಟ್ಟು ಟೆಂಡರ್ ಮೊತ್ತ ರೂ.765.0632ಕೋಟಿಗಳಿಗೆ ಅನುಮೋದನೆ ನೀಡಲಾಗಿದೆ.

ಇದಾದ ನಂತರ ಉಳಿದ ಪ್ಯಾಕೇಜ್‌ಗಳಿಗೆ ಕರೆಯಲಾದ ಮರು ಟೆಂಡರ್‌ನಲ್ಲಿ ಸ್ವೀಕೃತವಾಗಿರುವ 37 ಪ್ಯಾಕೇಜ್‌ಗಳಲ್ಲಿ ತಾಂತ್ರಿಕ ಪರಿಶೀಲನೆಯಲ್ಲಿ ಕಾರಣಾಂತರಗಳಿಂದ ಬಾಕಿ ಇರುವ 3 ಪ್ಯಾಕೇಜ್‌ಗಳನ್ನು ಹೊರತುಪಡಿಸಿದಂತೆ, ಮೊದಲನೇ ಕರೆಯ 2, 3ನೇ ಕರೆಯ 4, 4ನೇ ಕರೆಯ 18 ಮತ್ತು 5ನೇ ಕರೆಯ 10 ಟೆಂಡರ್‌ಗಳು ಸೇರಿ ಒಟ್ಟಾರೆ 34 ಪ್ಯಾಕೇಜ್‌ಗಳಿದ್ದು, ಈ ಪೈಕಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ ಅಧಿಕಾರ ವ್ಯಾಪ್ತಿಯಲ್ಲಿ ಅನುಮೋದಿಸಿದ 1 ಬಿಡ್ ಹೊರತುಪಡಿಸಿದಂತೆ ಒಟ್ಟಾರೆ 33 ಬಿಡ್‌ಗಳನ್ನು ಮಾತ್ರ ಸಮಿತಿಯ ಮುಂದೆ ಮಂಡಿಸಲಾಗಿದೆ.

ಟೆಂಡರ್ ಅಂಗೀಕಾರ ಪ್ರಾಧಿಕಾರ ಸಮಿತಿಯು ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಿಂದ ಅನುಮೋದನೆ ನೀಡಲಾಗಿರುವ ರೂ.5.00ಕೋಟಿ ಮೊತ್ತಕ್ಕಿಂತ ಕಡಿಮೆ ಮತ್ತು ಶೇ.5 ಮತ್ತು ಅದಕ್ಕಿಂತ ಕಡಿಮೆ ಟೆಂಡರ್ ಪ್ರೀಮಿಯಂ ಇರುವ 1 ಬಿಡ್ ಹೊರತುಪಡಿಸಿ 33 ಬಿಡ್‌ಗಳನ್ನು ಪರಿಶೀಲಿಸಿದಂತೆ ವಿವರಗಳು ಈ ಕೆಳಕಂಡಂತಿವೆ:

| | |
|---|---|
| • ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.5.00 ಕೋಟಿಗಿಂತ ಕಡಿಮೆ ಹಾಗೂ ಟೆಂಡರ್ ಪ್ರೀಮಿಯಂ ಶೇ.5 ಕ್ಕಿಂತ ಹೆಚ್ಚು ಹಾಗೂ 10 ರವರೆಗೆ ಇರುವ ಬಿಡ್‌ಗಳು ರೂ.19,70,59,548/- | 5 |
| • ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.5.00 ಕೋಟಿಗಿಂತ ಹೆಚ್ಚು ಹಾಗೂ ಟೆಂಡರ್ ಪ್ರೀಮಿಯಂ ಶೇ.10 ಮತ್ತು 10 ಕ್ಕಿಂತ ಕಡಿಮೆ ಇರುವ ಬಿಡ್‌ಗಳು ರೂ.104,47,91,287/- | 15 |
| • ಟೆಂಡರ್‌ಗಳಿಗೆ ಟೆಂಡರ್ ಪ್ರೀಮಿಯಂ ಶೇ.10 ಕ್ಕಿಂತ ಹೆಚ್ಚಿಗೆ ನಮೂದಿಸಿರುವ ಟೆಂಡರ್ ಬಿಡ್‌ಗಳು ರೂ.78,59,17,084/- | 13 |

ಸದರಿ ಟೆಂಡರ್‌ಗಳಿಗೆ ಸಂಬಂಧಿಸಿದಂತೆ ಟೆಂಡರ್ ಅಂಗೀಕಾರ ಪ್ರಾಧಿಕಾರ ಸಮಿತಿಯು ದಿನಾಂಕ:10-9-2015 ರಂದು ನಡೆದ ಸಭೆಯಲ್ಲಿ ಒಟ್ಟಾರೆ 33 ಬಿಡ್‌ಗಳನ್ನು ಪರಿಶೀಲಿಸಿ, ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.5.00ಕೋಟಿಗಿಂತ ಕಡಿಮೆ ಹಾಗೂ ಟೆಂಡರ್ ಪ್ರೀಮಿಯಂ ಶೇ.5 ಕ್ಕಿಂತ ಹೆಚ್ಚು ಹಾಗೂ 10 ರವರೆಗೆ ಇರುವ ಬಿಡ್‌ಗಳು, ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.5.00ಕೋಟಿಗಿಂತ ಹೆಚ್ಚು ಹಾಗೂ ಟೆಂಡರ್ ಪ್ರೀಮಿಯಂ ಶೇ.10 ಮತ್ತು 10 ಕ್ಕಿಂತ ಕಡಿಮೆ ಇರುವ ಬಿಡ್‌ಗಳು ಹಾಗೂ ಟೆಂಡರ್‌ಗಳಿಗೆ ಟೆಂಡರ್ ಪ್ರೀಮಿಯಂ ಶೇ.10 ಕ್ಕಿಂತ ಹೆಚ್ಚಿಗೆ ನಮೂದಿಸಿರುವ ಟೆಂಡರ್ ಬಿಡ್‌ಗಳಲ್ಲಿ ಗುತ್ತಿಗೆದಾರರು ಶೇ.10ರ ಒಳಗೆ ಸ್ವ ಇಚ್ಛೆಯಿಂದ ಒಪ್ಪಿಗೆ ನೀಡಿರುವ ಬಿಡ್‌ಗಳು ಸೇರಿ ಒಟ್ಟಾರೆ 33 ಟೆಂಡರ್‌ಗಳಿಗೆ ಅನುಮೋದನೆ ನೀಡಲು ಸಮಿತಿಯಲ್ಲಿ ತೀರ್ಮಾನಿಸಿರುತ್ತದೆ.

ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:58/4:ಆರ್‌ಆರ್‌ಸಿ:2015, ಬೆಂಗಳೂರು, ದಿನಾಂಕ:18-9-2015.**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ರಾಜ್ಯದ 189 ಗ್ರಾಮೀಣ ವಿಧಾನ ಸಭಾ ಕ್ಷೇತ್ರಗಳಲ್ಲಿ ತಲಾ 20 ಕಿ.ಮೀ ನಂತೆ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ-3 ರಡಿ ಕೆಆರ್‌ಆರ್‌ಡಿಎ ಸಂಸ್ಥೆಯಿಂದ ಅನುಮೋದನೆ ನೀಡಿರುವ ರೂ.5.00ಕೋಟಿ ಮೊತ್ತಕ್ಕಿಂತ ಕಡಿಮೆ

ಮತ್ತು ಶೇ.5 ಮತ್ತು ಅದಕ್ಕಿಂತ ಕಡಿಮೆ ಟೆಂಡರ್ ಪ್ರೀಮಿಯಂ ಇರುವ 2 ಬಿಡ್‌ಗಳನ್ನು ಅನುಬಂಧ-1ರಲ್ಲಿರುವಂತೆ ಹೊರತುಪಡಿಸಿ, ಉಳಿದಂತೆ

| | |
|---|---|
| • ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.5.00 ಕೋಟಿಗಿಂತ ಕಡಿಮೆ ಹಾಗೂ ಟೆಂಡರ್ ಪ್ರೀಮಿಯಂ ಶೇ.5 ಕ್ಕಿಂತ ಹೆಚ್ಚು ಹಾಗೂ 10 ರವರೆಗೆ ಇರುವ ಬಿಡ್‌ಗಳು- ಮೊತ್ತ ರೂ.19,70,59,548/- | 5 |
| • ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.5.00 ಕೋಟಿಗಿಂತ ಹೆಚ್ಚು ಹಾಗೂ ಟೆಂಡರ್ ಪ್ರೀಮಿಯಂ ಶೇ.10 ಮತ್ತು 10 ಕ್ಕಿಂತ ಕಡಿಮೆ ಇರುವ ಬಿಡ್‌ಗಳು - ಮೊತ್ತ ರೂ.104,47,91,287/- | 15 |
| • ಟೆಂಡರ್‌ಗಳಿಗೆ ಟೆಂಡರ್ ಪ್ರೀಮಿಯಂ ಶೇ.10 ಕ್ಕಿಂತ ಹೆಚ್ಚಿಗೆ ನಮೂದಿಸಿರುವ ಟೆಂಡರ್ ಬಿಡ್‌ಗಳು ಸ್ವ ಇಚ್ಛೆಯಿಂದ ಕಡಿಮೆ ದರಕ್ಕೆ ಒಪ್ಪಿಕೊಂಡ ಬಿಡ್‌ಗಳು- ಮೊತ್ತ ರೂ.78,59,17,084/- | 13 |

ಅನುಬಂಧ-2, 3 ಮತ್ತು 4ರಲ್ಲಿ ಲಗತ್ತಿಸಿರುವ ಒಟ್ಟು 33 ಸಂಖ್ಯೆಯ ಟೆಂಡರ್ ಪ್ಯಾಕೇಜ್‌ಗಳ ಒಟ್ಟು ಟೆಂಡರ್ ಮೊತ್ತ ರೂ.202.7767ಕೋಟಿಗಳಿಗೆ ಅನುಮೋದನೆ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು,
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿ:**

1. ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಆಡಿಟ್-1), ಕರ್ನಾಟಕ, ಬೆಂಗಳೂರು.
3. ~~ಮಹಾಲೇಖಪಾಲರು~~ (ಆಡಿಟ್-2), ಕರ್ನಾಟಕ, ಬೆಂಗಳೂರು.
4. ಮಾನ್ಯ ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ಮುಖ್ಯ ಮಂತ್ರಿಗಳ ಕಾರ್ಯಾಲಯ, ವಿಧಾನ ಸೌಧ, ಬೆಂಗಳೂರು.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು (ಸಚಿವ ಸಂಪುಟ), ವಿಧಾನ ಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು

9. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (PMU)(IF),5ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
11. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
12. ವಿಶೇಷಾಧಿಕಾರಿಗಳು (ಜಿಪಂ) ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ ವಿಧಾನ ಸೌಧ, ಬೆಂಗಳೂರು
13. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
14. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
15. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಟ್ರೆಜರಿ ಡಿಪಾರ್ಟ್‌ಮೆಂಟ್, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
16. ಅಧೀನ ಕಾರ್ಯದರ್ಶಿಗಳು (ವೆಚ್ಚ-6), ಜಿ.ಪಂ. ಆರ್ಥಿಕ ಇಲಾಖೆ,-ವಿಧಾನ ಸೌಧ, ಬೆಂಗಳೂರು.
17. ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಗ್ರಾಮೀಣಾಭಿವೃದ್ಧಿ ಭವನ, 3ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-9.
18. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-9.
19. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
20. ಎಲ್ಲಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತಗಳ ಅಧೀಕ್ಷಕ ಇಂಜಿನಿಯರ್‌ಗಳು.
21. ಎಲ್ಲಾ ಪಿಎಂಜಿಎಸ್‌ವೈ ಯೋಜನಾ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ಗಳು.
22. ಎಲ್ಲಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್
23. ಮಾಹಿತಿ ಕೇಂದ್ರದ ಗಣಕ ಕೋಶ ಮುಖ್ಯಸ್ಥರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಅಳವಡಿಸಲು ಹಾಗೂ ಗ್ರೂಪ್ ಮೈಲ್ ನಲ್ಲಿ ರವಾನಿಸಲು ಸೂಚಿಸಿದೆ.
24. ರಕ್ಷಾ ಕಡತ / ಹೆಚ್ಚುವರಿ ಪ್ರತಿ.

**ದಿನಾಂಕ 10.9.2015 ರಂದು ಸಂಜೆ 5.00 ಗಂಟೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ – 3 ರ ಕಾಮಗಾರಿಗಳಿಗೆ ನಡೆದ ಟೆಂಡರ್ ಅಂಗೀಕಾರ ಪ್ರಾಧಿಕಾರದ 4ನೇ ಸಭೆಯ ನಡವಳಿಗಳು**

**ಹಾಜರಿದ್ದ ಪ್ರಾಧಿಕಾರದ ಸದಸ್ಯರು**

1. ನಿರ್ದೇಶಕರು, (ಗ್ರಾಮೂಸೌ), ಸುವರ್ಣ ಗ್ರಾಮೋದಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
2. ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು, ಕೆ.ಆರ್.ಆರ್.ಡಿ.ಎ, ಬೆಂಗಳೂರು
3. ರಾಜ್ಯ ಗುಣ ನಿಯಂತ್ರಣ ಸಮನ್ವಯಾಧಿಕಾರಿಗಳು, ಕೆ.ಆರ್.ಆರ್.ಡಿ.ಎ, ಬೆಂಗಳೂರು
4. ಆರ್ಥಿಕ ನಿಯಂತ್ರಕರು, ಕೆ.ಆರ್.ಆರ್.ಡಿ.ಎ, ಬೆಂಗಳೂರು

ಗೈರು ಹಾಜರಿರುವ ಸದಸ್ಯರು: ಆಂತರಿಕ ಆರ್ಥಿಕ ಸಲಹೆಗಾರರು(ರಜೆಯ ಮೇಲೆ)

ಮುಖ್ಯ ಕಾರ್ಯಾಚರಣೆ ಅಧಿಕಾರಿಯವರು, ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ಸ್ವಾಗತ ಕೋರಿ ಈ ಕೆಳಗಿನ ಅಂಶಗಳನ್ನು ಸಭೆಯ ಗಮನಕ್ಕೆ ತಂದರು.

ಕರ್ನಾಟಕ ರಾಜ್ಯದ 189 ಗ್ರಾಮೀಣ ಮತ ಕ್ಷೇತ್ರಗಳಲ್ಲಿ ತಲಾ 20 ಕಿ.ಮೀ.ಗಳಂತೆ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ – 3 ರಡಿ ಒಟ್ಟಾರೆ 3780 ಕಿ.ಮೀ ಉದ್ದದ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ದಿನಾಂಕ 12.11.2014 ರಂದು ನಡೆದ ಸಚಿವ ಸಂಪುಟವು (ಪ್ರತಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜನರು ಹೆಚ್ಚು ವಾಸಿಸುವ ಗ್ರಾಮಗಳಿಗೆ ಸಂಪರ್ಕ ಒದಗಿಸಲು 8 ಕಿ.ಮೀ ಹಾಗೂ ಸಾಮಾನ್ಯ ಜನ ವಸತಿ ಪ್ರದೇಶಗಳಿಗೆ 12 ಕಿ.ಮೀ. ಒಳಗೊಂಡಂತೆ) ಒಟ್ಟು ರೂ.2079.00 ಕೋಟಿ ಮೊತ್ತಕ್ಕೆ ಅನುಮೋದನೆ ನೀಡಿರುತ್ತದೆ. ತದನಂತರದಲ್ಲಿ ಮಾನ್ಯ ಗ್ರಾಮೀಣ ವಿಧಾನ ಸಭಾ ಸದಸ್ಯರು ನೀಡಿದ ರಸ್ತೆಗಳ ಪಟ್ಟಿಗೆ ಅನುಗುಣವಾಗಿ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ವೃತ್ತಗಳ ದರಪಟ್ಟಿಗಳು ಪರಿಷ್ಕೃತಗೊಂಡಂತೆ ಒಟ್ಟಾರೆ 3855.24 ಕಿ.ಮೀ. ರಸ್ತೆಗಳಿಗೆ ಪರಿಷ್ಕೃತ ಮೊತ್ತ ರೂ.2676.57 ಕೋಟಿ ಮೊತ್ತಕ್ಕೆ ಸಚಿವ ಸಂಪುಟದ ಅನುಮೋದನೆ ಪಡೆಯಲು ಸರ್ಕಾರದಿಂದ ಹಣಕಾಸು ಇಲಾಖೆಗೆ ಕಡತವನ್ನು ಕಳುಹಿಸಲಾಗಿತ್ತು. ಸಚಿವ ಸಂಪುಟದ ಅನುಮೋದನೆ ಪಡೆಯುವುದು ವಿಳಂಬಗೊಳ್ಳಲಾಗಿ, ದಿನಾಂಕ 11.02.2015 ರಂದು ಮಾನ್ಯ ಮುಖ್ಯ ಮಂತ್ರಿಯವರ ಅನುಮೋದನೆಯಂತೆ ಸರ್ಕಾರದ ಪತ್ರ ಸಂಖ್ಯೆ ಗ್ರಾಅಪ 21 ಆರ್.ಆರ್.ಸಿ 2015 ದಿನಾಂಕ

11.2.2015 ರಲ್ಲಿ ಸೂಚಿಸಿದಂತೆ ಈ ಯೋಜನೆಯ ಎಲ್ಲ ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿ ನೀಡುವುದರೊಂದಿಗೆ ಟೆಂಡರ್ ಕರೆಯುವ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿರುತ್ತದೆ.

ಆಡಳಿತಾತ್ಮಕ ಅನುಮೋದನೆಯನ್ನು 1493 ರಸ್ತೆ ಹಾಗೂ 73 ಸೇತುವೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಒಟ್ಟಾರೆ 3855.24 ಕಿ.ಮೀ ರಸ್ತೆ ಅಭಿವೃದ್ಧಿಗೆ ಆದೇಶ ಸಂಖ್ಯೆ ಗ್ರಾಅಪ 6 ಆರ್.ಆರ್.ಸಿ 2015 ದಿನಾಂಕ 31.03.2015 ರಂತೆ ರಾಜ್ಯ ಸರ್ಕಾರದಿಂದ ರೂ.2676.57 ಕೋಟಿ ನೀಡಲಾಗಿರುತ್ತದೆ.

ಮುಖ್ಯ ಕಾರ್ಯಾಚರಣೆ ಅಧಿಕಾರಿರವರು ಈವರೆಗೂ ಒಟ್ಟಾರೆ 5 ಸಲ ಟೆಂಡರ್‌ಗಳನ್ನು ಕರೆಯಲಾದಂತೆ ಅವುಗಳ ವಿವರಗಳನ್ನು ಈ ಕೆಳಗಿನಂತೆ ಸಮಿತಿಯ ಮುಂದೆ ಮಂಡಿಸಿದರು.

**ಟೆಂಡರ್ ಅಂಗೀಕಾರ ಪ್ರಾಧಿಕಾರದ ವಿವಿಧ ಸಮಿತಿಗಳ ವಿವರಗಳು:**

1. ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಿಂದ ಮೇಲಿನಂತೆ ಎಲ್ಲಾ ಕಾಮಗಾರಿಗಳನ್ನು 409 ಪ್ಯಾಕೇಜ್ ಮಾಡಿ ಟೆಂಡರ್ ಕರೆಯಲಾದಂತೆ 304 ಪ್ಯಾಕೇಜ್‌ಗಳಿಗೆ ಪ್ರತಿಕ್ರಿಯೆ ಬರಲಾಗಿ, ಅವುಗಳಲ್ಲಿ 2 ಏಕೈಕ ಗುತ್ತಿಗೆದಾರರು ಭಾಗವಹಿಸಿ ಅನರ್ಹಗೊಳಿಸಲಾದ ಪ್ಯಾಕೇಜ್‌ಗಳು ಹಾಗೂ ಪ್ರತಿಕ್ರಿಯೆ ಬಾರದ 105 ಪ್ಯಾಕೇಜ್‌ಗಳು ಸೇರಿ ಒಟ್ಟು 107 ಪ್ಯಾಕೇಜ್‌ಗಳಿಗೆ ಮರು ಟೆಂಡರ್ ಕರೆಯಲಾಗಿತ್ತು. ಅದರಂತೆ ದಿನಾಂಕ 15.4.2015 ರಂದು ನಡೆದ **ಮೊದಲನೇ ಅಂಗೀಕಾರ ಪ್ರಾಧಿಕಾರ ಸಭೆಯಲ್ಲಿ** 169 ಪ್ಯಾಕೇಜ್ ಟೆಂಡರ್ ಗಳಿಗೆ ಅನುಮೋದನೆ ನೀಡಲಾಗಿರುತ್ತದೆ.

2. ದಿನಾಂಕ 18.4.2015 ರಂದು ನಡೆದ **ಎರಡನೇ ಅಂಗೀಕಾರ ಪ್ರಾಧಿಕಾರ ಸಭೆಯಲ್ಲಿ** ಒಟ್ಟಾರೆ ಸ್ವೀಕೃತ 88 ಟೆಂಡರ್‌ಗಳಲ್ಲಿ 72 ಪ್ಯಾಕೇಜ್ ಟೆಂಡರ್ ಗಳಿಗೆ ಅನುಮೋದನೆ ನೀಡಲಾಗಿರುತ್ತದೆ. ಇದರಿಂದಾಗಿ ದಿನಾಂಕ 18.4.2015 ರವರೆಗೆ ಒಟ್ಟಾರೆ 241 ~~ಟೆಂಡರ್ ಪ್ಯಾಕೇಜ್~~ ಗಳಿಗೆ ಅನುಮೋದನೆ ನೀಡಲಾಗಿರುತ್ತದೆ. ಹಾಗೂ ಉಳಿದ 16 ಪ್ಯಾಕೇಜ್‌ಗಳಿಗೆ ಮರು ಟೆಂಡರ್ ಕರೆಯಲು ಸೂಚಿಸಲಾದಂತೆ ಕ್ರಮ ಕೈಗೊಳ್ಳಲಾಗಿರುತ್ತದೆ.

3. ದಿನಾಂಕ 10.6.2015 ರಂದು ನಡೆದ **ಮೂರನೇ ಅಂಗೀಕಾರ ಪ್ರಾಧಿಕಾರದ ಸಭೆಯಲ್ಲಿ** ಸ್ವೀಕೃತವಾಗಿ ಉಳಿದ 120 ಪ್ಯಾಕೇಜ್‌ಗಳಲ್ಲಿ ತಾಂತ್ರಿಕ ಪರಿಶೀಲನೆಯಲ್ಲಿ ಕಾರಣಾಂತರಗಳಿಂದ ಬಾಕಿ ಇರುವ 9 ಪ್ಯಾಕೇಜ್‌ಗಳನ್ನು ಹೊರತುಪಡಿಸಿದಂತೆ ಮೊದಲನೇ ಕರೆಯ 31

ಟೆಂಡರ್‌ಗಳು, ಎರಡನೇ ಕರೆಯ 41 ಟೆಂಡರ್‌ಗಳು ಮತ್ತು ಮೂರನೇ ಕರೆಯ 39 ಟೆಂಡರ್‌ಗಳಂತೆ ಒಟ್ಟಾರೆ 111 ಟೆಂಡರ್ ಪ್ಯಾಕೇಜ್‌ಗಳಿಗೆ ಅನುಮೋದನೆ ನೀಡಲಾಗಿರುತ್ತದೆ. ಹಾಗೂ ಪ್ರತಿಕ್ರಿಯೆ ಬಾರದ 48 ಟೆಂಡರ್ ಪ್ಯಾಕೇಜ್‌ಗಳಿಗೆ ಮರು ಟೆಂಡರ್ ಕರೆಯಲು ಸೂಚಿಸಲಾಗಿರುತ್ತದೆ. ಅದರಂತೆ ಕ್ರಮ ಕೈಗೊಳ್ಳಲಾಗಿರುತ್ತದೆ.

4. ಇಂದಿನ ದಿನಾಂಕ 10.9.2015 ರ **ನಾಲ್ಕನೇ ಟೆಂಡರ್ ಅಂಗೀಕಾರ ಪ್ರಾಧಿಕಾರ ಸಮಿತಿ ಸಭೆಯಲ್ಲಿ** ಸ್ವೀಕೃತವಾದ 37 ಟೆಂಡರ್ ಪ್ಯಾಕೇಜ್‌ಗಳಲ್ಲಿ ತಾಂತ್ರಿಕ ಪರಿಶೀಲನೆಯಲ್ಲಿ ಬಾಕಿ ಇರುವ ಮೂರು ಪ್ಯಾಕೇಜ್‌ಗಳನ್ನು ಹೊರತುಪಡಿಸಿ ಮೊದಲನೇ ಕರೆಯ 2 ಟೆಂಡರ್‌ಗಳು, ಮೂರನೇ ಕರೆಯ 4 ಟೆಂಡರ್‌ಗಳು, ನಾಲ್ಕನೇ ಕರೆಯ 18 ಟೆಂಡರ್‌ಗಳು ಮತ್ತು ಐದನೇ ಕರೆಯ 10 ಟೆಂಡರ್‌ಗಳು ಒಟ್ಟಾರೆ 34 ಟೆಂಡರ್ ಪ್ಯಾಕೇಜ್‌ಗಳನ್ನು ಮಂಡಿಸಿದೆ. ಅವುಗಳ ವಿವರ ಕೆಳಗಿನಂತಿವೆ:

| <u>**ಮೊದಲನೇ ಕರೆಯ ಟೆಂಡರ್‌ಗಳು**</u> | |
|---|---|
| • ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.5.00 **ಕೋಟಿಗಿಂತ** ಕಡಿಮೆ ಹಾಗೂ ಟೆಂಡರ್ ಪ್ರೀಮಿಯಂ ಶೇ.5 ಕ್ಕಿಂತ ಹೆಚ್ಚು ಹಾಗೂ 10 ರವರೆಗೆ ಇರುವ ಬಿಡ್‌ಗಳು . . . . . . . . . . .<br>ಅ. ಏಕೈಕ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು . . . . . . . | 1 |
| • ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.5.00 **ಕೋಟಿಗಿಂತ** ಹೆಚ್ಚು ಹಾಗೂ ಟೆಂಡರ್ ಪ್ರೀಮಿಯಂ ಶೇ.10 ಹಾಗೂ 10 ಕ್ಕಿಂತ ಕಡಿಮೆ ಇರುವ ಬಿಡ್‌ಗಳು . . . . . . . . . . . . . .<br>ಅ. ಒಬ್ಬರಿಗಿಂತ ಹೆಚ್ಚಿಗೆ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು-1 | 1 |
| **ಒಟ್ಟು** | **2** |

| | |
|---|---|
| **ಮೂರನೇ ಕರೆಯ ಟೆಂಡರ್‌ಗಳು** | |
| • ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.5.00 ಕೋಟಿಗಿಂತ ಹೆಚ್ಚು ಹಾಗೂ ಟೆಂಡರ್ ಪ್ರೀಮಿಯಂ ಶೇ.10 ಹಾಗೂ 10 ಕ್ಕಿಂತ ಕಡಿಮೆ ಇರುವ ಬಿಡ್‌ಗಳು . . . . . . . . . . . . . .<br>ಅ. ಏಕೈಕ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು . . . . . . 1<br>ಆ. ಒಬ್ಬರಿಗಿಂತ ಹೆಚ್ಚಿಗೆ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು. .1 | 2 |
| • ಟೆಂಡರ್ ಪ್ರೀಮಿಯಂ ಶೇ.10 ಹಾಗೂ 10 ಕ್ಕಿಂತ ಹೆಚ್ಚು ಇರುವ ಬಿಡ್‌ಗಳು . . . . . . . . . . . . . . .<br>ಅ. ಏಕೈಕ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು . . . . . . . 2 | 2 |
| ಒಟ್ಟು | 4 |
| **ನಾಲ್ಕನೇ ಕರೆಯ ಟೆಂಡರ್‌ಗಳು**<br>• ರೂ.5.00 ಕೋಟಿ ಮೊತ್ತಕ್ಕಿಂತ ಕಡಿಮೆ ಮತ್ತು ಶೇ.5 ಮತ್ತು ಅದಕ್ಕಿಂತ ಕಡಿಮೆ ಟೆಂಡರ್ ಪ್ರೀಮಿಯಂ ಇರುವ ಬಿಡ್‌ಗಳು<br>ಅ. ಒಬ್ಬರಿಗಿಂತ ಹೆಚ್ಚಿಗೆ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು. 1<br>**(ಮುಖ್ಯಕಾರ್ಯಚರಣೆ ಅಧಿಕಾರಿ, ಕೆಆರ್‌ಆರ್‌ಡಿಎ, ಬೆಂಗಳೂರು ರವರಿಂದ ಅನುಮೋದಿಸಲ್ಪಟ್ಟಿದೆ. ಇದನ್ನು ಸಭೆಯ ಗಮನಕ್ಕೆ ಮಂಡಿಸಿದೆ)** | 1 |
| • ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.5.00 ಕೋಟಿಗಿಂತ ಕಡಿಮೆ ಹಾಗೂ ಟೆಂಡರ್ ಪ್ರೀಮಿಯಂ ಶೇ.5 ಕ್ಕಿಂತ ಹೆಚ್ಚು ಹಾಗೂ 10 ರವರೆಗೆ ಇರುವ ಬಿಡ್‌ಗಳು . . . . . . . . . . . . :<br>ಅ. ಏಕೈಕ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು . . . . . . . 3 | 3 |
| • ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.5.00 ಕೋಟಿಗಿಂತ ಹೆಚ್ಚು ಹಾಗೂ ಟೆಂಡರ್ ಪ್ರೀಮಿಯಂ ಶೇ.10 ಹಾಗೂ 10 ಕ್ಕಿಂತ ಕಡಿಮೆ ಇರುವ ಬಿಡ್‌ಗಳು . . . . . . . . . . . . . .<br>ಅ. ಏಕೈಕ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು . . . . . . 4<br>ಆ. ಒಬ್ಬರಿಗಿಂತ ಹೆಚ್ಚಿಗೆ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು.. 4 | 8 |
| • ಟೆಂಡರ್ ಪ್ರೀಮಿಯಂ ಶೇ.10 ಕ್ಕಿಂತ ಹೆಚ್ಚಿಗೆ ನಮೂದಿಸಿರುವ ಟೆಂಡರ್ ಬಿಡ್‌ಗಳು . . . . . . . . . 6 | 6 |
| ಒಟ್ಟು | 18 |

| ಐದನೇ ಕರೆಯ ಟೆಂಡರ್‌ಗಳು | |
|---|---|
| • ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.5.00 ಕೋಟಿಗಿಂತ ಕಡಿಮೆ ಹಾಗೂ ಟೆಂಡರ್ ಪ್ರೀಮಿಯಂ ಶೇ.5 ಕ್ಕಿಂತ ಹೆಚ್ಚು ಹಾಗೂ 10 ರವರೆಗೆ ಇರುವ ಬಿಡ್‌ಗಳು . . . . . . . . . . . . .<br>ಅ. ಒಬ್ಬರಿಗಿಂತ ಹೆಚ್ಚಿಗೆ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು 1 | 1 |
| • ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.5.00 ಕೋಟಿಗಿಂತ ಹೆಚ್ಚು ಹಾಗೂ ಟೆಂಡರ್ ಪ್ರೀಮಿಯಂ ಶೇ.10 ಹಾಗೂ 10 ಕ್ಕಿಂತ ಕಡಿಮೆ ಇರುವ ಬಿಡ್‌ಗಳು . . . . . . . . . . . . .<br>ಅ. ಏಕೈಕ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು . . . . . . 3<br>ಆ. ಒಬ್ಬರಿಗಿಂತ ಹೆಚ್ಚಿಗೆ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು.. 1 | 4 |
| • ಟೆಂಡರ್ ಪ್ರೀಮಿಯಂ ಶೇ.10 ಕ್ಕಿಂತ ಹೆಚ್ಚಿಗೆ ನಮೂದಿಸಿರುವ ಟೆಂಡರ್ ಬಿಡ್‌ಗಳು . . . . . . . . .<br>ಅ. ಏಕೈಕ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು . . . . . . 5 | 5 |
| **ಒಟ್ಟು** | **10** |
| **ಒಟ್ಟಾರೆ 1ನೇ ಕರೆ +3ನೇ ಕರೆ+4 ನೇ ಕರೆ+5ನೇ ಕರೆ** | **34** |

ಸಮಿತಿಯು ಮೇಲಿನ ಎಲ್ಲ 34 ಬಿಡ್‌ಗಳನ್ನು ಪರಿಶೀಲಿಸಿ,

- ಮೊದಲನೇ ಕರೆಯ ಏಕೈಕ ಗುತ್ತಿಗೆದಾರರು ಭಾಗವಹಿಸಿದ ಪ್ಯಾಕೇಜ್ ಟೆಂಡರ್‌ಗಳಲ್ಲಿ ಶೇ.5 ಕ್ಕಿಂತ ಹೆಚ್ಚು ಟೆಂಡರ್ ಪ್ರೀಮಿಯಂ ನಮೂದಿಸಿರುವ ಕೆಲವು ಗುತ್ತಿಗೆದಾರರು ಸ್ವ ಇಚ್ಛೆಯಿಂದ ಶೇ.5ಕ್ಕಿಂತ ಕಡಿಮೆ ಟೆಂಡರ್ ಪ್ರೀಮಿಯಂಗೆ ಒಪ್ಪಿರುವಂತೆ ಅವರ ಟೆಂಡರ್‌ಗಳನ್ನು ಅನುಮೋದಿಸಲು ಹಾಗೂ ಒಬ್ಬರಿಗಿಂತ ಹೆಚ್ಚಿಗೆ ಗುತ್ತಿಗೆದಾರರು ಭಾಗವಹಿಸಿದಲ್ಲಿ ಅಂತಹ ಟೆಂಡರ್‌ಗಳಿಗೆ ಗರಿಷ್ಠ ಶೇ.10 ನೀಡಲು ಒಪ್ಪಿರುತ್ತದೆ.
- ಮೂರನೇ, ನಾಲ್ಕನೇ ಹಾಗೂ ಐದನೇ ಕರೆಯ ಟೆಂಡರ್ ಪ್ಯಾಕೇಜ್‌ನಲ್ಲಿ ಶೇ.10 ಕ್ಕಿಂತ ಹೆಚ್ಚು ಟೆಂಡರ್ ಪ್ರೀಮಿಯಂ ನಮೂದಿಸಿರುವ 13 ಗುತ್ತಿಗೆದಾರರು ಸ್ವ ಇಚ್ಛೆಯಿಂದ ಶೇ.10 ಕ್ಕಿಂತ ಕಡಿಮೆ ಟೆಂಡರ್ ಪ್ರೀಮಿಯಂಗೆ ಒಪ್ಪಿಗೆ ಪತ್ರ ನೀಡಿದಂತೆ ಈ 13 ಟೆಂಡರ್‌ಗಳಿಗೆ ಸಮಿತಿಯು ಒಪ್ಪಿರುತ್ತದೆ.

ಒಟ್ಟಾರೆ ಅನುಬಂಧ-1 ರಿಂದ 4 ರಲ್ಲಿರುವುದನ್ನು ಸಮಿತಿಯು ಈ ಕೆಳಗಿನಂತೆ ಅನುಮೋದನೆ ನೀಡಿರುತ್ತದೆ.

| | |
|---|---|
| **ಮೊದಲನೇ ಕರೆಯ ಟೆಂಡರ್‌ಗಳು** | |
| • ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.5.00 ಕೋಟಿಗಿಂತ ಕಡಿಮೆ ಹಾಗೂ ಟೆಂಡರ್ ಪ್ರೀಮಿಯಂ ಶೇ.5 ಕ್ಕಿಂತ ಹೆಚ್ಚು ಹಾಗೂ 10 ರವರೆಗೆ ಇರುವ ಬಿಡ್‌ಗಳು . . . . . . . . . . . . .<br>ಅ. ಏಕೈಕ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು . . . . . . . | 1 |
| • ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.5.00 ಕೋಟಿಗಿಂತ ಹೆಚ್ಚು ಹಾಗೂ ಟೆಂಡರ್ ಪ್ರೀಮಿಯಂ ಶೇ.10 ಹಾಗೂ 10 ಕ್ಕಿಂತ ಕಡಿಮೆ ಇರುವ ಬಿಡ್‌ಗಳು . . . . . . . . . . . . . .<br>ಅ. ಒಬ್ಬರಿಗಿಂತ ಹೆಚ್ಚಿಗೆ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು-1 | 1 |
| ಒಟ್ಟು | 2 |
| **ಮೂರನೇ ಕರೆಯ ಟೆಂಡರ್‌ಗಳು** | |
| • ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.5.00 ಕೋಟಿಗಿಂತ ಹೆಚ್ಚು ಹಾಗೂ ಟೆಂಡರ್ ಪ್ರೀಮಿಯಂ ಶೇ.10 ಹಾಗೂ 10 ಕ್ಕಿಂತ ಕಡಿಮೆ ಇರುವ ಬಿಡ್‌ಗಳು . . . . . . . . . . . . . .<br>ಅ. ಏಕೈಕ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು . . . . . . 3<br>ಆ. ಒಬ್ಬರಿಗಿಂತ ಹೆಚ್ಚಿಗೆ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು. .1 | 4 |
| ಒಟ್ಟು | 4 |
| **ನಾಲ್ಕನೇ ಕರೆಯ ಟೆಂಡರ್‌ಗಳು**<br>• ರೂ.5.00 ಕೋಟಿ ಮೊತ್ತಕ್ಕಿಂತ ಕಡಿಮೆ ಮತ್ತು ಶೇ.5 ಮತ್ತು ಅದಕ್ಕಿಂತ ಕಡಿಮೆ ಟೆಂಡರ್ ಪ್ರೀಮಿಯಂ ಇರುವ ಬಿಡ್‌ಗಳಿಗೆ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಿಂದ ಅನುಮೋದನೆ ನೀಡಲಾಗಿರುವ ಬಿಡ್‌ಗಳು. . . . . . . . . . . . .<br>ಅ. ಒಬ್ಬರಿಗಿಂತ ಹೆಚ್ಚಿಗೆ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು. 1<br>**(ಮುಖ್ಯಕಾರ್ಯಚರಣೆ ಅಧಿಕಾರಿ, ಕೆಆರ್‌ಆರ್‌ಡಿಎ, ಬೆಂಗಳೂರು ರವರಿಂದ ಅನುಮೋದಿಸಲ್ಪಟ್ಟಿದೆ. ಇದನ್ನು ಸಭೆಯು ಗಮನಿಸಿತು.)** | 1 |

| | |
|---|---|
| • ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.5.00 ಕೋಟಿಗಿಂತ ಕಡಿಮೆ ಹಾಗೂ ಟೆಂಡರ್ ಪ್ರೀಮಿಯಂ ಶೇ.5 ಕ್ಕಿಂತ ಹೆಚ್ಚು ಹಾಗೂ 10 ರವರೆಗೆ ಇರುವ ಬಿಡ್‌ಗಳು . . . . . . . . . .<br>ಅ. ಏಕೈಕ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು . . . . . . 3 | 3 |
| • ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.5.00 ಕೋಟಿಗಿಂತ ಹೆಚ್ಚು ಹಾಗೂ ಟೆಂಡರ್ ಪ್ರೀಮಿಯಂ ಶೇ.10 ಹಾಗೂ 10 ಕ್ಕಿಂತ ಕಡಿಮೆ ಇರುವ ಬಿಡ್‌ಗಳು . . . . . . . . . . . .<br>ಅ. ಏಕೈಕ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು . . . . . . 4<br>ಆ. ಒಬ್ಬರಿಗಿಂತ ಹೆಚ್ಚಿಗೆ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು.. 4 | 8 |
| • ಟೆಂಡರ್ ಪ್ರೀಮಿಯಂ ಶೇ.10 ಕ್ಕಿಂತ ಹೆಚ್ಚು ನಮೂದಿಸಿದ್ದು, ಸ್ವ ಇಚ್ಛೆಯಿಂದ ಶೇ. 10ಕ್ಕಿಂತ ಕಡಿಮೆ ಟೆಂಡರ್ ಪ್ರೀಮಿಯಂಗೆ ಕಾಮಗಾರಿ ನಿರ್ವಹಿಸಲು ಒಪ್ಪಿಗೆ ಪತ್ರ ನೀಡಿರುವ ಬಿಡ್‌ದಾರರು . . . . . . .<br>ಅ. ಏಕೈಕ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು . . . . . . 6 | 6 |
| ಒಟ್ಟು | 18 |
| <u>ಐದನೇ ಕರೆಯ ಟೆಂಡರ್‌ಗಳು</u> | |
| • ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.5.00 ಕೋಟಿಗಿಂತ ಕಡಿಮೆ ಹಾಗೂ ಟೆಂಡರ್ ಪ್ರೀಮಿಯಂ ಶೇ.5 ಕ್ಕಿಂತ ಹೆಚ್ಚು ಹಾಗೂ 10 ರವರೆಗೆ ಇರುವ ಬಿಡ್‌ಗಳು . . . . . . . . . .<br>ಅ. ಒಬ್ಬರಿಗಿಂತ ಹೆಚ್ಚಿಗೆ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು 1 | 1 |
| • ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.5.00 ಕೋಟಿಗಿಂತ ಹೆಚ್ಚು ಹಾಗೂ ಟೆಂಡರ್ ಪ್ರೀಮಿಯಂ ಶೇ.10 ಹಾಗೂ 10 ಕ್ಕಿಂತ ಕಡಿಮೆ ಇರುವ ಬಿಡ್‌ಗಳು . . . . . . . . . . .<br>ಅ. ಏಕೈಕ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು . . . . . . 3<br>ಆ. ಒಬ್ಬರಿಗಿಂತ ಹೆಚ್ಚಿಗೆ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು.. 1 | 4 |

| | |
|---|---|
| • ಟೆಂಡರ್ ಪ್ರೀಮಿಯಂ ಶೇ.10 ಕ್ಕಿಂತ ಹೆಚ್ಚು ನಮೂದಿಸಿದ್ದು, ಸ್ವ ಇಚ್ಛೆಯಿಂದ ಶೇ. 10ಕ್ಕಿಂತ ಕಡಿಮೆ ಟೆಂಡರ್ ಪ್ರೀಮಿಯಂಗೆ ಕಾಮಗಾರಿ ನಿರ್ವಹಿಸಲು ಒಪ್ಪಿಗೆ ಪತ್ರ ನೀಡಿರುವ ಬಿಡ್‌ದಾರರು ....... ಅ. ಏಕೈಕ ಗುತ್ತಿಗೆದಾರರು ಭಾಗವಹಿಸಿರುವ ಬಿಡ್‌ಗಳು ...... 5 | 5 |
| **ಒಟ್ಟು** | **10** |
| **ಒಟ್ಟಾರೆ 1ನೇ ಕರೆ +3ನೇ ಕರೆ+4 ನೇ ಕರೆ+5ನೇ ಕರೆ** | **34** |

ಈ ಮೇಲಿನ 34 ಟೆಂಡರ್ ಪ್ಯಾಕೇಜ್‌ಗಳಲ್ಲಿ ನಾಲ್ಕನೇ ಕರೆಯ ಪ್ಯಾಕೇಜ್ ಸಂಖ್ಯೆ: ಕೆ.ಎಸ್: 11–38 ನ್ನು ಕೆಆರ್‌ಆರ್‌ಡಿಎ ಮಟ್ಟದಲ್ಲಿ ಅನುಮೋದಿಸಲಾಗಿರುವುದರಿಂದ ಈ ಪ್ಯಾಕೇಜ್‌ನ್ನು ಹೊರತುಪಡಿಸಿ 33 ಟೆಂಡರ್‌ಗಳಿಗೆ ಸಮಿತಿಯು ಅನುಮೋದಿಸಿದೆ.

ಈವರೆಗೂ ಪ್ರತಿಕ್ರಿಯೆ ಬಾರದ 29 ಟೆಂಡರ್‌ಗಳಿಗೆ ಮರು ಟೆಂಡರ್ ಕರೆಯಲು ಸಮಿತಿಯು ಒಪ್ಪಿರುತ್ತದೆ.

ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಸದಸ್ಯ ಕಾರ್ಯದರ್ಶಿ ಮತ್ತು
ಆರ್ಥಿಕ ನಿಯಂತ್ರಕರು
ಕೆ.ಆರ್.ಆರ್.ಡಿ.ಎ

D.M. Vishwanath
ರಾಜ್ಯ ಗುಣ ನಿಯಂತ್ರಣ
ಸಮನ್ವಯಾಧಿಕಾರಿ,
ಕೆ.ಆರ್.ಆರ್.ಡಿ.ಎ

ಮುಖ್ಯ ಕಾರ್ಯಾಚರಣೆ ಅಧಿಕಾರಿ
ಕೆ.ಆರ್.ಆರ್.ಡಿ.ಎ

ನಿರ್ದೇಶಕರು, ಗ್ರಾಮೂಸೌ
ಸುವರ್ಣ ಗ್ರಾಮೋದಯ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ

ಅಧ್ಯಕ್ಷರು ಹಾಗೂ ಸರ್ಕಾರದ ಪ್ರಧಾನ
ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್
ಇಲಾಖೆ

Annexure-1.

Less than 5 crores Tender Percentage Less than 5%

| Sl.No | District | Constituency | Package No | Amount Put to tender as per Sanctioned Estimate (Rs) | Amount Put to tender as per CSR (Rs.) | No of Bidders Qualified | Name of Lowest Bidder | Amount Quoted By Contractor(Rs) | Percentage on Amount Put to tender as per estimate | Percentage on Amount Put to tender as per CSR | Amount Agreed By Contractor(Rs) | Percentage Agreed as per CSR | eProc indent No |
|---|---|---|---|---|---|---|---|---|---|---|---|---|---|
| 4th Call | | | | | | | | | | | | | |
| 1 | Dakshina Kannada | Sullia | KS-11-38 | 49570414 | 49570414 | 2 | V V BALAN | 51159947 | 3.207 | 3.207 | - | - | 939 |

ಆರ್ಥಿಕ ನಿಯಂತ್ರಕರು
ಕೆ.ಆರ್.ಆರ್.ಡಿ.ಎ, ಬೆಂಗಳೂರು

ರಾಜ್ಯ ಗುಣ ನಿಯಂತ್ರಣ
ಸಮನ್ವಯಾಧಿಕಾರಿ,
ಕೆ.ಆರ್.ಆರ್.ಡಿ.ಎ, ಬೆಂಗಳೂರು

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಕೆ.ಆರ್.ಆರ್.ಡಿ.ಎ ಬೆಂಗಳೂರು

ನಿರ್ದೇಶಕರು, ಗ್ರಾಮೊಸೌ ಸುವರ್ಣ
ಗ್ರಾಮೋದಯ ಗ್ರಾಮೀಣಾಭಿವೃದ್ಧಿ
ಮತ್ತು ಪಂಚಾಯತ್ ರಾಜ್ ಇಲಾಖೆ

ಅಧ್ಯಕ್ಷರು ಹಾಗೂ ಸರ್ಕಾರದ ಪ್ರಧಾನ
ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್
ರಾಜ್ ಇಲಾಖೆ

Annexure-2

Less than 5 Crore Tender Percentage between 5 to 10%

| Sl.No | District | Constituency | Package No | Amount Put to tender as per Sanctioned Estimate (Rs) | Amount Put to tender as per CSR (Rs.) | No of Bidders Qualified | Name of Lowest Bidder | Amount Quoted By Contractor(Rs) | Percentage on Amount Put to tender as per estimate | Percentage on Amount Put to tender as per CSR | Amount Agreed By Contractor(Rs) | Percentage Agreed as per CSR | eProc indent No |
|---|---|---|---|---|---|---|---|---|---|---|---|---|---|
| **1st Call** | | | | | | | | | | | | | |
| 1 | Bagalkot | Bagalkot | KS-01-15 | 47276727 | 47276727 | 1 | CHANNAPPA RUDRAPPA ROODAGI | 51530207 | 8.997 | 8.997 | 49636000 | 4.99 | 713 |
| **4th Call** | | | | | | | | | | | | | |
| 1 | Bidar | Bhalki | KS-06-12 | 40401915 | 40401915 | 1 | GOVIND NIRGUDE | 44188586 | 9.373 | 9.373 | - | - | 959 |
| 2 | Koppal | Gangavati | KS-20-08 | 9506927 | 9506927 | 1 | Janadri Ramachandra | 10456281 | 9.986 | 9.986 | - | - | 844 |
| 3 | Mandya | Malavalli | KS-21-16 | 47438992 | 47438992 | 1 | HANUMANTHA RAO | 50093698 | 5.596 | 5.596 | - | - | 787 |
| **5th Call** | | | | | | | | | | | | | |
| 1 | Bagalkot | Badami | KS-01-13 | 40436164 | 40436164 | 2 | NANAGOUDA B BIRADAR | 42684983 | 5.561 | 5.561 | - | - | 709 |

ಆರ್ಥಿಕ ನಿಯಂತ್ರಕರು
ಕೆ.ಆರ್.ಆರ್.ಡಿ.ಎ,
ಬೆಂಗಳೂರು

D.M. Vishwanath
ರಾಜ್ಯ ಗುಣ ನಿಯಂತ್ರಣ
ಸಮನ್ವಯಾಧಿಕಾರಿ,
ಕೆ.ಆರ್.ಆರ್.ಡಿ.ಎ,
ಬೆಂಗಳೂರು

ಮುಖ್ಯ ಕಾರ್ಯಾಚರಣೆ ಅಧಿಕಾರಿ
ಕೆ.ಆರ್.ಆರ್.ಡಿ.ಎ ಬೆಂಗಳೂರು

ನಿರ್ದೇಶಕರು, ಗ್ರಾಮೂಸೌ ಸುವರ್ಣ
ಗ್ರಾಮೋದಯ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ

ಅಧ್ಯಕ್ಷರು ಹಾಗೂ ಸರ್ಕಾರದ ಪ್ರಧಾನ
ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್
ರಾಜ್ ಇಲಾಖೆ

## Annexure-3

### More than 5 crores Tender Percentage upto 10%

| Sl.No | District | Constituency | Package No | Amount Put to tender as per Sanctioned Estimate (Rs) | Amount Put to tender as per CSR (Rs.) | No of Bidders Qualified | Name of Lowest Bidder | Amount Quoted By Contractor(Rs) | Percentage on Amount Put to tender as per estimate | Percentage on Amount Put to tender as per CSR | Amount Agreed By Contractor(Rs) | Percentage Agreed as per CSR | eProc Indent No |
|---|---|---|---|---|---|---|---|---|---|---|---|---|---|
| | | | | | | | 1st Call | | | | | | |
| 1 | Raichur | Deodurga | KS-23-11 | 59357703 | 59357703 | 2 | Virupakshappa B | 55634337 | -6.273 | -6.273 | - | - | 776 |
| | | | | | | | 3rd Call | | | | | | |
| 1 | Bidar | Bkalyan | KS-06-20 | 92468789 | 92468789 | 2 | Jagadish Chanabasappa Khandre | 101629781 | 9.907 | 9.907 | - | - | 967 |
| 2 | Dakshina Kannada | Mangalore North | KS-11-25 | 67499499 | 67499499 | 1 | S PREMANATH | 74215697 | 9.95 | 9.95 | - | - | 926 |
| | | | | | | | 4th Call | | | | | | |
| 1 | Belgaum | Saundati-Parasagad | KS-04-56 | 76302347 | 76302347 | 2 | APPAYYAPPA LAXMAN DANDIN | 82788731 | 8.501 | 8.501 | - | - | 671 |
| 2 | Gadag | Shirahatti | KS-14-13 | 75295470 | 75295470 | 1 | M DINESH HEGADE | 82587766 | 9.685 | 9.685 | - | - | 875 |
| 3 | Gulbarga | Sedam | KS-15-27 | 65280093 | 65280093 | 1 | CHANNANAGOUDA SIDDANAGOUDA PATIL | 71416376 | 9.4 | 9.4 | - | - | 984 |
| 4 | Hassan | Belur | KS-16-16 | 54427585 | 54427585 | 1 | T M CHANDRAPPA | 59858941 | 9.979 | 9.979 | - | - | 1004 |
| 5 | Haveri | Ranebennur | KS-17-19 | 57815040 | 57815040 | 1 | R N GANGOL | 63586925 | 9.983 | 9.983 | - | - | 869 |
| 6 | Kolar | KGF | KS-19-12 | 59195038 | 59195038 | 2 | GOVINDAPPA CHANDRE GOWDA | 60346807 | 1.946 | 1.946 | - | - | 766 |
| 7 | Kolar | KGF | KS-19-13 | 55317894 | 55317894 | 2 | GOVINDAPPA CHANDRE GOWDA | 56163876 | 1.529 | 1.529 | - | - | 765 |
| 8 | Koppal | Yelaburga | KS-20-18 | 67992913 | 67992913 | 2 | R P Patil | 74057883 | 8.92 | 8.92 | - | - | 851 |
| | | | | | | | 5th Call | | | | | | |
| 1 | Haveri | Hanagal | KS-17-13 | 61995033 | 61995033 | 1 | M. CHANDRASHEKAR SHETTY | 68065643 | 9.792 | 9.792 | - | - | 863 |
| 2 | Haveri | Haveri & Savanur Part | KS-17-15 | 55399456 | 55399456 | 2 | UMESH SHETTY | 58154385 | 4.973 | 4.973 | - | - | 865 |
| 3 | Tumkur | Turuvekere | KS-25-35 | 51816807 | 51816807 | 1 | G M BASAVARAJ | 56941149 | 9.889 | 9.889 | - | - | 859 |
| 4 | Belgaum | Belgaum grameena | KS-04-32 | 72249204 | 72249204 | 1 | VASANT ANNASAHEB DHARAV | 79342990 | 9.818 | 9.818 | - | - | 647 |

ಆರ್ಥಿಕ ನಿಯಂತ್ರಕರು
ಕೆ.ಆರ್.ಆರ್.ಡಿ.ಎ, ಬೆಂಗಳೂರು

ರಾಜ್ಯ ಗುಣ ನಿಯಂತ್ರಣ
ಸಮನ್ವಯಾಧಿಕಾರಿ,
ಕೆ.ಆರ್.ಆರ್.ಡಿ.ಎ, ಬೆಂಗಳೂರು

ಮುಖ್ಯ ಕಾರ್ಯಾಚರಣೆ ಅಧಿಕಾರಿ
ಕೆ.ಆರ್.ಆರ್.ಡಿ.ಎ ಬೆಂಗಳೂರು

ನಿರ್ದೇಶಕರು, ಗ್ರಾಮೂಸೌ ಸುವರ್ಣ
ಗ್ರಾಮೋದಯ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ

ಅಧ್ಯಕ್ಷರು ಸರ್ಕಾರದ ಪ್ರಧಾನ
ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್
ರಾಜ್ ಇಲಾಖೆ

**Annexure-4**

**Tender Percentage more than 10%**

| Sl.No | District | Constituency | Package No | Amount Put to tender as per Sanctioned Estimate (Rs) | Amount Put to tender as per CSR (Rs.) | No of Bidders Qualified | Name of Lowest Bidder | Amount Quoted By Contractor(Rs) | Percentage on Amount Put to tender as per estimate | Percentage on Amount Put to tender as per CSR | Amount Agreed By Contractor (Rs) | Percentage Agreed as per CSR | eProc indent No |
|---|---|---|---|---|---|---|---|---|---|---|---|---|---|
| | **3rd Call** | | | | | | | | | | | | |
| 1 | Kolar | Mulabagal | KS-19-18 | 71954289 | 71954289 | 1 | B M CHANDREGOWDA | 79583434 | 10.603 | 10.603 | 79142522 | 9.99 | 769 |
| 2 | Kolar | Mulabagal | KS-19-19 | 42136473 | 42136473 | 1 | B M CHANDREGOWDA | 46552426 | 10.48 | 10.48 | 46345907 | 9.99 | 773 |
| | **4th Call** | | | | | | | | | | | | |
| 1 | Bellary | Kampli | KS-05-19 | 79571372 | 79571372 | 1 | VEERESH GOWDA K | 115378341 | 45.00 | 45.00 | 87520552 | 9.99 | 903 |
| 2 | Bellary | Sandoor | KS-05-22 | 49470056 | 49470056 | 1 | P PRABHAKAR REDDY | 57666474 | 16.568 | 16.568 | 54412115 | 9.99 | 906 |
| 3 | Hassan | H.N. Pura | KS 16-19 | 83759300 | 83759300 | 1 | H.C. VENKATESH | 95534542 | 14.058 | 14.058 | 92093350 | 9.95 | 1006 |
| 4 | Haveri | Shiggaon & Savanur Part | KS-17-21 | 55178506 | 55178506 | 1 | BEERANNA S GAONKAR | 71085275 | 28.828 | 28.828 | 60688632 | 9.986 | 871 |
| 5 | Koppal | Gangavati | KS-20-09 | 67596913 | 67596913 | 1 | Sankranthi Prasad | 75030356 | 10.997 | 10.997 | 74349845 | 9.99 | 1001 |
| 6 | Koppal | Yelaburga | KS-20-17 | 59533762 | 59533762 | 1 | K Tangavelu | 70176131 | 17.876 | 17.876 | 65481185 | 9.99 | 850 |
| | **5th Call** | | | | | | | | | | | | |
| 1 | Bellary | Siruguppa | KS-05-24 | 47427594 | 45323794 | 1 | M/S USHA KIRAN CONSTRUCTIONS | 52406047 | 10.50 | 15.63 | 49851641 | 9.99 | 908 |
| 2 | Hassan | Sakaleshpura | KS 16-22 | 63736472 | 63736472 | 1 | G BALARAJ | 77264883 | 21.226 | 21.226 | 70078250 | 9.95 | 1009 |
| 3 | Mysore | Hunsur | KS-22-16B | 44161740 | 42863293 | 1 | SOMASHEKARA A | 49599987 | 12.31 | 15.72 | 47145335 | 9.99 | 1036 |
| 4 | Mysore | Varuna | KS-22-26A | 36210604 | 34737221 | 1 | M/s P Dasaratharama Reddy | 41274143 | 13.98 | 18.82 | 38193574 | 9.95 | 1044 |
| 5 | Mysore | Varuna | KS-22-26B | 19527112 | 18748683 | 1 | M/s P Dasaratharama Reddy | 22317170 | 14.29 | 19.03 | 20614176 | 9.95 | 1045 |

ಆರ್ಥಿಕ ನಿಯಂತ್ರಕರು
ಕೆ.ಆರ್.ಆರ್.ಡಿ.ಎ,
ಬೆಂಗಳೂರು

ರಾಜ್ಯ ಗುಣ ನಿಯಂತ್ರಣ
ಸಮನ್ವಯಾಧಿಕಾರಿ,
ಕೆ.ಆರ್.ಆರ್.ಡಿ.ಎ, ಬೆಂಗಳೂರು

ಮುಖ್ಯ ಕಾರ್ಯಾಚರಣೆ ಅಧಿಕಾರಿ
ಕೆ.ಆರ್.ಆರ್.ಡಿ.ಎ ಬೆಂಗಳೂರು

ನಿರ್ದೇಶಕರು, ಗ್ರಾಮೂಸ್ ಸುವರ್ಣ
ಗ್ರಾಮೋದಯ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ

ಅಧ್ಯಕ್ಷರು [illegible] ಪ್ರಧಾನ
ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್
ರಾಜ್ ಇಲಾಖೆ